

ಶಾ.ಮಂ.ಕೃಷ್ಣರಾಯ

# ಕೊಂಕಣಿ ಶಾರದೆಗೆ ಹೂವು ಮುಡಿಸಿದವರು

## ಕುವೆಂಪು ಪ್ರಶಸ್ತಿ ಪುರಸ್ಕೃತ ಮಹಾಬಳೇಶ್ವರ ಸೈಲ್

ಭಾರತದ ಅಧಿಕೃತ ಭಾಷೆಗಳಲ್ಲಿ ಕೊಂಕಣಿಯೂ ಒಂದು. ಮುಂಬಯಿಯಿಂದ ಕನ್ಯಾಕುಮಾರಿಯವರೆಗೆ ಪಸರಿಸಿದ ಪಡುವಣ ಕರಾವಳಿಯಲ್ಲಿ ಕೊಂಕಣಿ ಭಾಷಿಕರು ಹೆಚ್ಚಾಗಿ ವಾಸಿಸುತ್ತಿದ್ದಾರೆ. ಗೋವಾದ ರಾಜ್ಯ ಭಾಷೆ ಕೊಂಕಣಿ. ಈ ಭಾಷೆಯನ್ನು ಕನ್ನಡ, ದೇವನಾಗರಿ, ಅರಬ್ಬಿ, ರೋಮನ್, ಮಲಯಾಳಂ ಲಿಪಿಗಳಲ್ಲಿ ಬರೆಯುತ್ತಾರೆ. 1975ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯು ಮಾನ್ಯತೆ ನೀಡಿ, ಕೊಂಕಣಿ ಭಾಷೆಯ ಅಧಿಕೃತ ಲಿಪಿ ‘ದೇವನಾಗರಿ’ ಎಂದು ಘೋಷಿಸಿತು. 1992ರಲ್ಲಿ ಭಾರತದ ಸಂವಿಧಾನದ ಎಂಟನೆಯ ಅನುಸೂಚಿಯಲ್ಲಿ ನಮೂದಿಸಲಾಗಿರುವ ರಾಷ್ಟ್ರಭಾಷೆಗಳ ಪಟ್ಟಿಗೆ ಕೊಂಕಣಿ, ನೇಪಾಳಿ, ಮಣಿಪುರಿ ಭಾಷೆಗಳು ಸೇರಿದವು.

1961ರ ಡಿಸೆಂಬರ್ 19ರಂದು ಗೋವಾ, ಪೋರ್ಚುಗೀಸರ ಕಪಿಮುಷ್ಟಿಯಿಂದ ಬಿಡುಗಡೆಗೊಂಡ ನಂತರ ಕೊಂಕಣಿ ಭಾಷೆಯ ಪುನರ್‌ರಚನೆಗೆ ಹೊಸ ಹುರುಪು ಬಂದಿತು. 1977ರಲ್ಲಿ ಲೇಖಕ ರವೀಂದ್ರ ಕೆಳೆಕಾರ್‌ರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಥಮ ಪ್ರಶಸ್ತಿ ಬಂತು. ಅನಂತರ ಪ್ರತಿವರ್ಷ ದೇವನಾಗರಿ ಲಿಪಿಯಲ್ಲಿ ಕೊಂಕಣಿ ಸಾಹಿತ್ಯ ರಚಿಸಿದವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಗಳು ಬಂದಿವೆ. ಇದುವರೆಗೆ ಇಬ್ಬರಿಗೆ ಜ್ಞಾನಪೀಠ ಪ್ರಶಸ್ತಿ ಮತ್ತು ಒಬ್ಬರಿಗೆ ಮಾತ್ರ ‘ಸರಸ್ವತಿ ಸಮ್ಮಾನ್’ ಪ್ರಶಸ್ತಿ ಸಿಕ್ಕಿದೆ. ಸರಸ್ವತಿ ಸಮ್ಮಾನಕ್ಕೆ ಪಾತ್ರರಾದ ಪ್ರಥಮ ಕೊಂಕಣಿ ಲೇಖಕ ಮಹಾಬಳೇಶ್ವರ ಸೈಲ್. ಈ ಬಾರಿ ಅವರಿಗೆ ‘ರಾಷ್ಟ್ರಕವಿ ಕುವೆಂಪು ಪುರಸ್ಕಾರ’ ಸಂದಿದೆ.

ಮಹಾಬಳೇಶ್ವರ ಸೈಲ್ ನಮ್ಮವರೇ. ಕೊಂಕಣಿ ಮಾತೃಭಾಷೆಯ ಕನ್ನಡಿಗರು. ಅವರು ಮೂಲತಃ ಗೋವಾದವರಾದರೂ ಅವರ ಮುತ್ತಜ್ಜನ ಕಾಲದಲ್ಲಿ ಕಾರವಾರ ಬಳಿಯ ಮಾಜಾಳಿಯೆಂಬ ಹಳ್ಳಿಯಲ್ಲಿ ನೆಲೆಸಿದವರು. ಕಾರವಾರದ ಹತ್ತಿರವೇ ಕಾಳಿ ನದಿ ಹರಿಯುತ್ತಿದೆ. ಕಾಳಿನದಿಯ ದಂಡೆಯಲ್ಲಿ